Compt/Uplok/BD/1681-2022 PO ARE-5

# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/1681/2022
ಪಿ.ಓ.ಎ.ಆರ್.ಇ-5 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 12/09/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ರಾಜ.ಪಿ @ ರಾಜು ಲೇಟ್ ಪಾಪಯ್ಯ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಹಾಗೂ ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಕೋಲಾರ ಜಿಲ್ಲೆ. ಇವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿದ ಕುರಿತಂತೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಎಸಿಬಿ ಪೋಲಿಸ್ ಠಾಣೆ ಕೋಲಾರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. ರಾಜ .ಪಿ @ ರಾಜು ಲೇಟ್ ಪಾಪಯ್ಯ, ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಹಾಗೂ ಪ್ರಭಾರ ಜಿಲ್ಲಾ ವ್ಯವಸ್ಥಾಪಕರು, ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಕೋಲಾರ ಜಿಲ್ಲೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಶ್ರೀ ವೆಂಕಟೇಶಪ್ಪ ಬಿನ್ ಲೇಟ್ ಮುನಿವೆಂಕಟಪ್ಪ, ಧನಮಟ್ನಹಳ್ಳಿ ಗ್ರಾಮ ಮೇಮಗಲ್ ಹೋಬಳಿ ಕೋಲಾರ ತಾಲ್ಲೂಕು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ತಲಗುಂದ ಗ್ರಾಮದ ಸರ್ವೇ ನಂ. 151 ರಲ್ಲಿ ಬೋರ್‌ವೆಲ್ ಕೋರೆಸುವ ಸಲುವಾಗಿ ದಿನಾಂಕ:25/05/2017 ರಂದು ಅರ್ಜಿ ಸಲ್ಲಿಸಿದ್ದು, ಬೋರ್‌ವೆಲ್ ಕೊರೆಸುವ ಕುರಿತಂತೆ ಯಾವುದೇ ಕ್ರಮ ಜರುಗಿಸಿಲ್ಲವಾದ್ದರಿಂದ ದಿನಾಂಕ:22-10-2018 ರಂದು ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರಿಗೆ ಫೋನ್ ಮಾಡಲಾಗಿ ವಿಷಯ ನಿರ್ವಾಹಕನಾದ, ಚೇತನ್@ಚೇತನ್‌ಕಿರಣ್ ಎನ್. ಇವರೊಂದಿಗೆ ಮಾತನಾಡಲು ತಿಳಿಸಿದ್ದು, ಅದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಅದೇ ದಿನ ಚೇತನ್@ಚೇತನ್‌ಕಿರಣ್ ಎನ್. ಇವರನ್ನು ಭೇಟಿ ಮಾಡಲಾಗಿ ಸದರಿಯವರು ರೂ. 30,000/- ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಅದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ದೂರು ಸಲ್ಲಿಸಿದ್ದು, ಸದರಿ ದೂರು ಕೋಲಾರ ಎಸಿಬಿ ಪೋಲಿಸ್ ಠಾಣಾ ಗುನ್ನಾ ನಂ. 18/2018 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ

ಪ್ರತಿಬಂಧಕ ಕಾಯ್ದೆ ಕಲ7(a), 7(A) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಚೇತನ್@ಚೇತನ್‌ಕಿರಣ್ ಎನ್. ಇವರ ಮೂಲಕ ರೂ. 30,000/- ಲಂಚಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-02 ಇವರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i) ದೂರುದಾರರಾದ **ಶ್ರೀ ವೆಂಕಟೇಶಪ್ಪ ಬಿನ್ ಲೇಟ್ ಮುನಿವೆಂಕಟಪ್ಪ, ಧನಮಟ್ನಹಳ್ಳಿ ಗ್ರಾಮ ಮೇಮಗಲ್ ಹೋಬಳಿ ಕೋಲಾರ ತಾಲ್ಲೂಕು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೆನೆಂದರೆ ದೂರುದಾರರು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ತಲಗುಂದ ಗ್ರಾಮದ ಸರ್ವೇ ನಂ. 151 ರಲ್ಲಿ ಬೋರ್‌ವೆಲ್ ಕೋರೆಸುವ ಸಲುವಾಗಿ ದಿನಾಂಕ: 25/05/2017 ರಂದು ಅರ್ಜಿ ಸಲ್ಲಿಸಿದ್ದು, ಬೋರ್‌ವೆಲ್ ಕೊರೆಸುವ ಕುರಿತಂತೆ ಯಾವುದೇ ಕ್ರಮ ಜರುಗಿಸಿಲ್ಲವಾದ್ದರಿಂದ ದಿನಾಂಕ:22-10-2018 ರಂದು ದೂರುದಾರರು ತಮ್ಮ ಮೊಬೈಲ್‌ನಿಂದ ಎದುರುದಾರರಿಗೆ ಫೋನ್ ಮಾಡಲಾಗಿ ವಿಷಯ ನಿರ್ವಾಹಕನಾದ ಚೇತನ್@ಚೇತನ್‌ಕಿರಣ್ ಎನ್. ಇವರೊಂದಿಗೆ ಮಾತನಾಡಲು ತಿಳಿಸಿದ್ದು, ಅದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಅದೇ ದಿನ ಚೇತನ್ ಇವರನ್ನು ಭೇಟಿ ಮಾಡಲಾಗಿ ಸದರಿಯವರು ರೂ. 30,000/- ಲಂಚಕ್ಕೆ ಬೇಡಿಕೆ ಇಟ್ಟಿದ್ದು, ಸದರಿ ಬೇಡಿಕೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ:27/10/2018 ರಂದು ಕೋಲಾರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.18/2018 ರಲ್ಲಿ, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7(a), 7(A) ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಚಂದ್ರಶೇಖರಯ್ಯ (ನೆರಳುಸಾಕ್ಷಿ) 2) ಎನ್. ರಮೇಶ್‌ಬಾಬು ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ಲಂಚ ನೀಡಲು ತಂದ ರೂ. 30,000/- (2000X15) ಗಳನ್ನು ಹಾಗೂ ಮೊಬೈಲ್‌ನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಮೊಬೈಲ್‌ನಲ್ಲಿ ರೆಕಾರ್ಡ ಆಗಿದ್ದ (ದೂರುದಾರರು ಎದುರುದಾರರೊಂದಿಗೆ ಹಾಗೂ

ಚೇತನ್‌ಕಿರಣ್ ಇವರೊಂದಿಗೆ) ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ಸದರಿ ಸಂಭಾಷಣೆಯನ್ನು ಲಿಪಿಕರಿಸಿ ಸಿಡಿಗಳಿಗೆ ವರ್ಗಾಯಿಸಿಕೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಶ್ರೀ ಎನ್. ರಮೇಶ್‌ಬಾಬು ಇವರ ಮೂಲಕ ದೂರುದಾರರ ಪ್ಯಾಂಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಂಚ-2 ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಚಂದ್ರಶೇಖರಯ್ಯ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ದೂರುದಾರರಿಗೆ ವಾಯ್ಸ್ ರೆಕಾರ್ಡರ್ ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 27-10-2018 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.45 ಘಂಟೆಯವರೆಗೆ ಕೋಲಾರ ಎಸಿಬಿ ಪೊಲೀಸ್ ಠಾಣೆಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

ಅದೇ ದಿನ ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಕೋಲಾರ ಇವರ ಹಳೆ ಕಛೇರಿಯನ್ನು ತಲುಪಿ ದೂರುದಾರರು ಹಾಗೂ ನೆರಳುಸಾಕ್ಷಿಯನ್ನು ಕಚೇರಿ ಒಳಗಡೆ ಕಳುಹಿಸಿದ್ದು, ಅಲ್ಲಿ ಹಾಜರಿದ್ದ ಸಿಬ್ಬಂದಿಯನ್ನು ವಿಚಾರಿಸಲಾಗಿ ಎದುರುದಾರರು ಟಮಕಾದಲ್ಲಿ ಹೊಸದಾಗಿ ನಿರ್ಮಿಸಿದ ಕಛೇರಿಯಲ್ಲಿರುವುದಾಗಿ ತಿಳಿಸಿದ್ದರಿಂದ ಅಲ್ಲಿಗೆ ಹೋಗಿ ವಿಚಾರಿಸಲಾಗಿ ಎದುರುದಾರರು ಕೆಲಸದ ನಿಮಿತ್ತ ಹೊರಗಡೆ ಹೋಗಿದ್ದಾರೆಂದು ತಿಳಿಸಿದ್ದರಿಂದ ಕಛೇರಿ ಅವಧಿ ಮುಗಿಯುವರೆಗೆ ಕಾಯ್ದು ಸಾಯಂಕಾಲ 6.00 ಘಂಟೆ ಕೋಲಾರ ಎಸಿಬಿ ಕಛೇರಿಗೆ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ.

iii) ತನಿಖಾಧಿಕಾರಿಯವರ ಸೂಚನೆ ಮೇರೆಗೆ ದಿನಾಂಕ: 29-10-2018 ರಂದು ಕೋಲಾರ ಎಸಿಬಿ ಕಛೇರಿಯಲ್ಲಿ ಪಂಚರು ಹಾಜರಿದ್ದು, ಪಂಚ-2 ರವರು ಹಣವನ್ನು ದೂರುದಾರರ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟಿರುತ್ತಾರೆ. ಈ ಹಿಂದೆ ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ

ಹೇಳಿದ ಸೂಚನೆಗಳನ್ನು ಪಾಲಿಸುವಂತೆ ತನಿಖಾಧಿಕಾರಿಗಳು ಪಂಚರಿಗೆ ಹೇಳಿರುತ್ತಾರೆ. ದಾಳಿತಂಡದವರು ಪೊಲೀಸ್ ಠಾಣೆಯನ್ನು ಬಿಟ್ಟು, ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕೋಲಾರ ಇವರ ಹಳೆ ಕಛೇರಿಯನ್ನು ಸುಮಾರು 11.30 ಕ್ಕೆ ತಲುಪಿರುತ್ತಾರೆ. ದೂರುದಾರರನ್ನು ಹಾಗೂ ನೆರಳು ಸಾಕ್ಷಿಯನ್ನು ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಕೋಲಾರ ಇವರ ಹಳೆ ಕಛೇರಿ ಒಳಗಡೆ ಕಳುಹಿಸಿ, ದಾಳಿತಂಡದವರು ಮರೆಯಲ್ಲಿ ಗುಪ್ತವಾಗಿ ಸಂಜ್ಞೆಗಾಗಿ ಕಾಯುತ್ತಾ ನಿಂತಿರುತ್ತಾರೆ. ದೂರುದಾರರು ಕಛೇರಿಯ ಒಳಗೆ ಹೋಗಿದ್ದು ವಿಷಯ ನಿರ್ವಾಹಕನಾಗಿ ಅನಧಿಕೃತವಾಗಿ ಕೆಲಸ ಮಾಡುವ ಚೇತನ್‌ಕಿರಣ್ ಕಛೇರಿಯಲ್ಲಿ ಹಾಜರಿದ್ದು, ಸದರಿಯವರು ಹಣವನ್ನು ತಂದಿದ್ದಿಯಾ ಎಂದು ಕೇಳಿ, ಹಣವನ್ನು ಕೊಟ್ಟರೆ ನಾಳೆಯೇ ಬೋರ್‌ವೆಲ್ ಕೊರೆಯಿಸುವುದಾಗಿ ಹೇಳಿ ದೂರುದಾರರಿಂದ ಹಣವನ್ನು ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟಿನ ಬಲ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಇದನ್ನು ನೆರಳುಸಾಕ್ಷಿಯು ಮರೆಯಲ್ಲಿ ನಿಂತು ವೀಕ್ಷಿಸಿರುತ್ತಾರೆ. ಸುಮಾರು 12.00 ಘಂಟೆ ಸಮಯದಲ್ಲಿ ಎದುರುದಾರರು ಹಣ ಪಡೆದುಕೊಂಡಿದ್ದು, ತಕ್ಷಣ ದೂರುದಾರರು ದಾಳಿತಂಡದವರಿಗೆ ಸಂಜ್ಞೆ ನೀಡಿರುತ್ತಾರೆ. ದಾಳಿತಂಡದವರು ದೂರುದಾರರ ಹತ್ತಿರ ಬಂದು, ದೂರುದಾರರನ್ನು ವಿಚಾರಿಸಲಾಗಿ, ಎದುರುದಾರರನ್ನು ತೋರಿಸಿ, ಇವರೇ ತನ್ನಿಂದ ರೂ.30,000/- ಹಣವನ್ನು ಕೇಳಿ ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ನುಡಿದಿರುತ್ತಾರೆ. ನೆರಳುಸಾಕ್ಷಿಯು ಕೂಡ ಎದುರುದಾರರ ಹೇಳಿಕೆಗೆ ಅನುಗುಣವಾಗಿ ನುಡಿದಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸಲು ಸೂಚಿಸಿರುತ್ತಾರೆ. ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಎದುರುದಾರರ ಎರಡು ಕೈ ಬೆರಳುಗಳನ್ನು ತೊಳೆಯಲಾಗಿ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-1 ರವರು ಎದುರುದಾರರ ಪ್ಯಾಂಟ್ ಜೇಬಿನಿಂದ ಹಣವನ್ನು ತೆಗೆದು ಹಾಜರುಪಡಿಸಿದ್ದು, ಸದರಿ ಹಣವನ್ನು ಪಂಚರು ಈ ಮೊದಲೇ ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ತಾಳೆ ಹೊಂದಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ, ಹಣ ಇಟ್ಟುಕೊಂಡ ಬಲ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ಚೇತನ್‌ಕಿರಣ್ ರವರು ಬೀರುವಿನಿಂದ ತೆಗೆದು ಹಾಜರುಪಡಿಸಿದ್ದು, ಸದರಿ ಕಡತದ ಪ್ರತಿ ತಯಾರಿಸಿ ಸದರಿ

ದಾಖಲೆಗಳನ್ನು ಕಛೇರಿ ಅಧೀಕ್ಷಕರಾದ ತಿಪ್ಪೇರುದ್ರಪ್ಪ ಇವರಿಂದ ಧೃಡಿಕರಿಸಿ ಪಡೆದುಕೊಂಡಿರುತ್ತಾರೆ. ತಾಂತ್ರಿಕ ಕಾರಣಗಳಿಂದ ಟ್ರ್ಯಾಪ್ ಸಮಯದಲ್ಲಿನ ಸಂಭಾಷಣೆಯು ರೆಕಾರ್ಡ್ ಆಗಿರುವುದಿಲ್ಲ. ಎದುರುದಾರರಿಗೆ ತಮ್ಮ ಸಮಾಜಾಯಿಷಿಯನ್ನು ಬರೆದುಕೊಡಲು ತಿಳಿಸಿದ್ದು, ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಟ್ಟಿದ್ದೆನೆಂದರೆ, ಈಗಾಗಲೇ ವೆಂಕಟೇಶ್ವರ್ ಬೋರ್‌ವೆಲ್ ಇವರಿಗೆ ದೂರುದಾರರ ಜಮೀನಿನಲ್ಲಿ ಬೋರ್‌ವೆಲ್ ಕೋರೆಯಲು ಕಾರ್ಯದೇಶ ನೀಡಲಾಗಿದೆ. ಚೇತನ್‌ಕಿರಣ್ ಜೊತೆ ಮಾತನಾಡಿದ್ದು ತನಗೆ ಗೊತ್ತಿಲ್ಲ. ತಾನು ಯಾವುದೇ ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ. ಅದೇ ಪ್ರಕಾರ ಚೇತನ್‌ಕಿರಣ್ ಇವರು ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು "ದಿನಾಂಕ: 22-10-2018 ರಂದು ಎದುರುದಾರರು ತನ್ನನ್ನು ಭೇಟಿಯಾಗುಲು ತಿಳಿಸಿದ್ದಾರೆಂದು ಹೇಳಿ ದೂರುದಾರರು ತನ್ನ ಹತ್ತಿರ ಬಂದಿದ್ದು, ತಾನು ಎದುರುದಾರರಿಗೆ ಫೋನ್ ಮಾಡಲಾಗಿ ದೂರುದಾರರ ಹತ್ತಿರ ರೂ. 30,000/- ಲಂಚ ಕೇಳುವಂತೆ ಹೇಳಿದ್ದರಿಂದ ತಾನು ಹಣವನ್ನು ಎದುರುದಾರರಿಗೆ ನೀಡಲು ಪಡೆದುಕೊಂಡಿರುತ್ತಾರೆ. ತಾನು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ತಮ್ಮ ಸಮಜಾಯಿಷಿಯನ್ನು ಬರೆದುಕೊಟ್ಟಿರುತ್ತಾರೆ" ಎದುರುದಾರರ ಸಮಜಾಯಿಷಿಯ ಬಗ್ಗೆ ಚೇತನ್‌ಕಿರಣ್ ಇವರನ್ನು ಕೇಳಲಾಗಿ ಎದುರುದಾರರು ಬರೆದುಕೊಟ್ಟ ಸಮಜಾಯಿಷಿಯು ಸುಳ್ಳಿನಿಂದ ಕೂಡಿರುತ್ತದೆ ಎಂದು ನುಡಿದಿರುತ್ತಾರೆ. ಕಿರಿಯ ಇಂಜಿನಿಯರ್ ರವರು ತನಿಖಾಧಿಕಾರಿಗಳ ಸೂಚನೆ ಮೇರೆಗೆ ಸ್ಥಳದ ನಕ್ಷೆ ತಯಾರಿಸಿರುತ್ತಾರೆ. ಚೇತನ್‌ಕಿರಣ್, ಇವರು ದೂರುದಾರರೊಂದಿಗೆ ನಡೆಸಿದ ಸಂಭಾಷಣೆಯ ಲಿಪಿಯನ್ನು ಮೂರು ಬಾರಿ ಓದಿಸುವ ಮೂಲಕ ಸದರಿಯವರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ಅದೇ ಪ್ರಕಾರ ಎದುರುದಾರರು ದೂರುದಾರರೊಂದಿಗೆ ನಡೆಸಿದ ಸಂಭಾಷಣೆಯ ಲಿಪಿಯನ್ನು ಮೂರು ಬಾರಿ ಓದಿಸುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ಅದೇ ಪ್ರಕಾರ ದೂರುದಾರರು ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯ ಲಿಪಿಯನ್ನು ಮೂರು ಬಾರಿ ಓದಿಸುವ ಮೂಲಕ ದೂರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡು ಸಿಡಿಗೆ ವರ್ಗಾಯಿಸಿರುತ್ತಾರೆ. ಎದುರುದಾರರ ಮೇಲಾಧಿಕಾರಿಯಾದ ಅರುಣ್‌ಕುಮಾರ್ ಉಪ ಪ್ರಧಾನ ವ್ಯವಸ್ಥಾಪಕರು, ಡಾ॥ ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಸಿಡಿಯಲ್ಲಿದ್ದ ಎದುರುದಾರರ ಸಂಭಾಷಣೆಯನ್ನು ಪ್ಲೇ ಮಾಡಿ ಕೇಳಿಸಲಾಗಿ ಅದರಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಅದೇ ಪ್ರಕಾರ ಕಛೇರಿಯ ಅಧೀಕ್ಷಕರಾದ ತಿಪ್ಪೇರುದ್ರಪ್ಪ ಇವರಿಗೆ ಸಿಡಿಯಲ್ಲಿದ್ದ ಚೇತನ್@ಚೇತನ್‌ಕಿರಣ್ ಇವರ ಸಂಭಾಷಣೆಯನ್ನು ಪ್ಲೇ ಮಾಡಿ ಕೇಳಿಸಲಾಗಿ ಅದರಲ್ಲಿದ್ದ ಒಂದು ಧ್ವನಿಯು

ಚೇತನ್@ಚೇತನ್‌ಕಿರಣ್ ಇವರದೆಂದು ಗುರುತಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 29/10/2018 ರಂದು ಮಧ್ಯಾಹ್ನ 12.00 ರಿಂದ 7.30 ಗಂಟೆಂವರೆಗೆ ಕೋಲಾರದ ಡಾ॥ ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹಳೆ ಕಛೇರಿಯಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಚೇತನ್@ಚೇತನ್‌ಕಿರಣ್ ಇವರ ಎರಡು ಕೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದಾಗಿ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಚೇತನ್@ಚೇತನ್‌ಕಿರಣ್, ದೂರುದಾರರು ಹಾಗೂ ಎದುರುದಾರರ ಪ್ರಶ್ನಿತ ಧ್ವನಿಗಳು ಸದರಿಯವರ ಮಾದರಿ ಧ್ವನಿಗಳಿಗೆ ತಾಳೆಯಾಗುತ್ತವೆಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಎದುರುದಾರರ ಮೇಲಾಧಿಕಾರಿಯಾದ ಅರುಣ್‌ಕುಮಾರ್ ಉಪ ಪ್ರಧಾನ ವ್ಯವಸ್ಥಾಪಕರು, ಡಾ॥ ಬಿ. ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು ಇವರಿಗೆ ಸಿಡಿಯಲ್ಲಿದ್ದ ಎದುರುದಾರರ ಸಂಭಾಷಣೆಯನ್ನು ಪ್ಲೇ ಮಾಡಿ ಕೇಳಿಸಲಾಗಿ ಅದರಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ.

v) ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಲಯದ ಮುಂದೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ಸದರಿಯವರನ್ನು ಸೇವೆಯಿಂದ ತೆಗೆದು ಹಾಕಲು ಅಧಿಕಾರ ಹೊಂದಿದ ಪ್ರಾಧಿಕಾರದಿಂದ ಪಿ.ಎಸ್.ಓ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಪತ್ರ ದಿನಾಂಕ:03/06/2022 ರಂತೆ ಸಮಜಾಯಿಷಿಯನ್ನು ಸಲ್ಲಿಸಿದ್ದಾರೆ, ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಶ್ರೀನಿವಾಸಪುರ ಶಾಸಕರು, 2017-18 ನೇ ಸಾಲಿಗೆ ಸಂಬಂಧಿದಂತೆ, ದೂರುದಾರರ ಹೆಸರನ್ನು ಗಂಗಾಕಲ್ಯಾಣ ಯೋಜನೆ ಸೌಲಭ್ಯಕ್ಕೆ ಆಯ್ಕೆ ಮಾಡಿರುತ್ತಾರೆ, ದಿನಾಂಕ:28/05/2018 ರಂದು ದೂರುದಾರರು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ್ದು, ಅಂದೆ ಜಮೀನಿಗೆ ಬೇಟಿ ನೀಡಿ ಫೋಟೋ ತೆಗೆದುಕೊಳ್ಳಲಾಗಿದೆ. ತಹಶೀಲ್ದಾರ ಹಾಗೂ ಗ್ರಾಮ ಲೆಕ್ಕಾಧಿಕಾರಿ ನೀಡಿದ ಜಮೀನಿನ ಚೆಕ್‌ಬಂದಿಯಲ್ಲಿ ವ್ಯತ್ಯಾಸ ಇದ್ದುದ್ದರಿಂದ, ಅಂದೆ ಜಿಲ್ಲಾ ವ್ಯವಸ್ಥಾಪಕರಿಗೆ ಮಾಹಿತಿ ನೀಡಲಾಗಿದೆ. ಪ್ರಭಾರ ಜಿಲ್ಲಾ ವ್ಯವಸ್ಥಾಪಕನಾಗಿ ತಾನು ದಿನ್ನಾಂಕ:30/08/2018 ರಂದು ಪ್ರಭಾರ ವಹಿಸಿಕೊಂಡಿರುತ್ತೇನೆ. ಪ್ರಭಾರ ವಹಿಸಿಕೊಂಡ ನಂತರ ತಾನು ಹಂತ ಹಂತವಾಗಿ ಕಡತಗಳನ್ನು ವಿಲೇವಾರಿ ಮಾಡಿದ್ದೇನೆ. ನಂತರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಟೆಂಡನಲ್ಲಿ ಆಯ್ಕೆಯಾದ ಗುತ್ತಿಗೆದಾರರಿಗೆ ಕೊಳವೆ ಬಾವಿ ಕೊರೆಯಲು ಕಾರ್ಯಾದೇಶ ನೀಡಿರುತ್ತೇನೆ. ಜಿಲ್ಲಾಧಿಕಾರಿಗಳ

ಭವನಕ್ಕೆ ನಮ್ಮ ಕಚೇರಿಯನ್ನು ಸ್ಥಳಾಂತರಿಸಬೇಕಾಗಿರುವುದರಿಂದ ಮತ್ತು ಆ ಕಾಲಕ್ಕೆ ದಸರಾ ಪೂಜೆ ಇದ್ದುದ್ದರಿಂದ ಕಚೇರಿ ಕೆಲಸವು ಮಂದಗತಿಯಲ್ಲಿ ಸಾಗುತ್ತಿತ್ತು. ಅದೇ ಕಾಲಕ್ಕೆ ದೂರುದಾರರು ಪದೇ ಪದೇ ಕಚೇರಿಗೆ ಬಂದು ಕಚೇರಿ ಕೆಲಸಕ್ಕೆ ಅಡಚಣೆ ಮಾಡಿ ಅಮಾನವೀಯತೆಯನ್ನು ಪ್ರದರ್ಶಿಸಿರುತ್ತಾರೆ. ತಾನು ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿರುತ್ತೇನೆ, ವಿಷಯ ನಿರ್ವಾಹಕರು ಮೇಲಾಧಿಕಾರಿಗಳಿಗೆ ಲಂಚ ನೀಡಬೇಕೆಂದು ಹೇಳಿರುವುದು ತನಗೆ ಸಂಬಂಧವಿರುವುದಿಲ್ಲ, ತಾನು ಚೇತನ್ ಹಾಗೂ ದೂರುದಾರರೊಂದಿಗೆ ಹಣದ ವ್ಯವಹಾರ ಇಟ್ಟುಕೊಂಡಿಲ್ಲ, ಹಣಕಾಶಿನ ವ್ಯವಹಾರದ ಬಗ್ಗೆ ತನ್ನ ಸಂಬಾಷಣೆ ಇರುವುದಿಲ್ಲ, ತನ್ನ ಹತ್ತಿರ ದೂರುದಾರರ ಯಾವುದೇ ಕೆಲಸ ಬಾಕಿ ಇರಲಿಲ್ಲ, ತಾನು ಕೋಲಾರದ ಬ್ಯಾಂಕ ಮ್ಯಾನೇಜರ ಹತ್ತಿರ ಇದ್ದಾಗ ತನ್ನನ್ನು ಎಸಿಬಿ ಗೆ ಸೇರಿದ ಮಧುಸುದನ್ ರವರು ನನಗೆ ಹಂಚಿಕೆ ಮಾಡಿದ ಜೀಪ್‌ನ್ನು ತಾನೇ ಚಲಾಯಿಸಿಕೊಂಡು ತನ್ನನ್ನು ಕಚೇರಿಗೆ ಕರೆದುಕೊಂಡು ಬಂದಿರುತ್ತಾರೆ, ತನ್ನ ಮೇಲೆ ಮಾಡಿದ ಆಪಾದನೆ ಸುಳ್ಳಿನಿಂದ ಕೂಡಿದ್ದು, ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳು ಇರುವುದಿಲ್ಲ, ಇಲಾಖಾ ವಿಚಾರಣೆ ನಡೆದಲ್ಲಿ ಆಪಾದನೆಗಳ ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳಬಹುದಾಗಿದೆ. ಆದ್ದರಿಂದ ಎದುರುದಾರರ ಸಮಜಾಯಿಷಿಯನ್ನು ತಳ್ಳಿಹಾಕಲಾಗಿದೆ.

5. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ಮೇಲ್ಕಂಡಂತೆ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕೆ.ಸಿ.ಎಸ್.ಆರ್ (ನಡತೆ) ನಿಯಮ 1966 ನಿಯಮ 3 (1) (i) to (iv) ಅನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬಂದಿರುವುದರಿಂದ ಇಲಾಖಾ ವಿಚಾರಣೆಗೆ ಒಳಪಡಲು ಎದುರುದಾರರು ಬಾದ್ಯರಾಗಿರುತ್ತಾರೆ.

6. ಎದುರುದಾರರು ದಿ: 31-01-2019 ರಂದು ನಿವೃತ್ತಿ ಹೊಂದಿರುವುದರಿಂದ, ಮೇಲ್ಕಂಡ ದುರ್ನಡತೆಗೆ ಸಂಬಂಧಿಸಿದಂತೆ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕೆ.ಸಿ.ಎಸ್.ಆರ್ ಕಲಂ 214 (2)(ಬಿ) (i) ಅನ್ವಯ ಅನುಮತಿಸಿ, ಅದೇ ನಿಯಮ 214 (2)(ಬಿ) (iii) ಅನ್ವಯ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

12/9/24

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು–2
ಕರ್ನಾಟಕ ರಾಜ್ಯ, ಬೆಂಗಳೂರು.